ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

HOSADIGANTHAKANNADADAILY

Tuesday, January 3, 2012

# ಪಂಪನ ಕಾವ್ಯದ ಒಲವು ಇಂದಿಗೂ ಪ್ರಸ್ತುತ: ಕಂಬಾರ

**ಬೆಂಗಳೂರು:** ಮಹಾಕವಿ ಪಂಪ ಹಾಕಿಕೊಟ್ಟ ಕಾವ್ಯದ ಒಲವು ಇಂದಿಗೂ ಪ್ರಸ್ತುತ ಎಂದು ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ನಗರದ ಜೈನ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ಜೈನ ಧರ್ಮದಲ್ಲಿನ ಕಲೆ, ಸಂಸ್ಕೃತಿ ಹಾಗೂ ಬರವಣಿಗೆಯ ಪ್ರಭಾವ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಪಂಪನ ಕಾವ್ಯಗಳನ್ನು ಇಂದಿಗೂ ಉಳಿಸಿ, ಬೆಳೆಸಿಕೊಂಡು ಬಂದಿರುವುದು ಕನ್ನಡ ಸಾಹಿತ್ಯ ಲೋಕದ ಸೌಭಾಗ್ಯ ಎಂದು ಹರ್ಷ ವ್ಯಕ್ತಪಡಿಸಿದ ಅವರು, ಪಂಪ ಹಾಕಿಕೊಟ್ಟ ಹಾದಿಯನ್ನೇ ಕುಮಾರವ್ಯಾಸ ಅನುಸರಿಸಿ, ಕನ್ನಡ ಕಾವ್ಯಗಳ ಮೂಲಕ ಇತಿಹಾಸ ರಚನೆ ಮಾಡಿದರು. ಪಂಪ ಕನ್ನಡದ ನಿಜವಾದ ನಾಡೋಜ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ಮಾರ್ಗದರ್ಶಕ

ಕನ್ನಡದ ಸಾಹಿತಿಗಳಿಗೆ ಪಂಪ ಮಾರ್ಗದರ್ಶಕ .ಅವರು ಹಾಕಿಕೊಟ್ಟ ಸಾಹಿತ್ಯ ಮಾರ್ಗದಲ್ಲೇ ನಡೆಯುವುದು ಹೆಚ್ಚು ಸೂಕ್ತ ಎಂಬ ಅನಿಸಿಕೆ ವ್ಯಕ್ತಪಡಿಸಿದ ಅವರು, ಇಳಿಗಾಲದ ಹಾದಿಯಲ್ಲಿದ್ದ ಸಂಸ್ಕೃತವನ್ನು ಕನ್ನಡದೊಂದಿಗೆ ಸಮನ್ವಯ ಮಾಡಿಕೊಂಡು ಕಾವ್ಯ ರಚನೆ ಮಾಡಿದರು. ಅವರ ಕ್ರಾಂತಿಕಾರಕ ಕಾವ್ಯ ರಚನೆಯ ಸ್ಫೂರ್ತಿ ಇಂದಿನ ಸಾಹಿತಿಗಳಲ್ಲೂ ಮೂಡುವಂತಾಗಬೇಕು ಎಂದು ಅವರು ಆಶಿಸಿದರು.

ಕಲೆ, ಸಂಸ್ಕೃತಿ ಹಾಗೂ ಬರಹದಲ್ಲೂ ಜೈನ ಸಾಹಿತ್ಯ ಮುಂಚೂಣಿಯಲ್ಲಿದೆ. ಭರತ, ಬಾಹುಬಲಿ, ಶಾಕುಂತಲೆ ಸೇರಿದಂತೆ ಜೈನ ಸಂಸ್ಕೃತಿ ಉಳಿಯುವಲ್ಲಿ ಇತರರ ಪಾತ್ರ ಅಪಾರ ಎಂದರು.

## ಕೊಡುಗೆ

ಸಾಹಿತಿ ಹಂಪಾ ನಾಗರಾಜಯ್ಯ ಮಾತನಾಡಿ, ಜೈನ ಧರ್ಮ ಕಲೆ ಸಾಹಿತ್ಯ ಹಾಗೂ ಬರಹದ ಜತೆಗೆ ಶಿಕ್ಷಣ ಕ್ಷೇತ್ರಕ್ಕೂ ಸಾಕಷ್ಟು ಕೊಡುಗೆ ನೀಡಿದೆ. ದೇಶ ವಿದೇಶದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಜೈನ ಧರ್ಮ ಕಟ್ಟಿ ಸಮರ್ಥವಾಗಿ ನಡೆಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರಾಮಾಯಣ, ಮಹಾಭಾರತಕ್ಕೆ ಹೊಂದಿಕೊಂಡಂತಹ ಮಹಾಕಾವ್ಯಗಳು ಜೈನ ಧರ್ಮದಲ್ಲೂ ರಚನೆಯಾಗಿವೆ. ಚೋರಿ ಕಥೆಗಳಂತಹ ಪ್ರಸಿದ್ಧ ಜೈನ ಸಾಹಿತ್ಯ ಗ್ರಂಥಗಳು ರಚನೆಗೊಂಡಿವೆ ಎಂದರು.

ಜೈನ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ. ಆರ್. ಚೆನ್‌ರಾಜ್, ಕುಲಪತಿ ಡಾ. ಎನ್. ಸುಂದರರಾಜನ್, ಪತ್ರಕರ್ತ ಡಾ. ಗುಲಾಬ್ ಕೊಠಾರಿ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.